**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ**
ಸಿಸಿ ನಂ**: 191/2020**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ:** |
|---|---|---|
| ಚನ್ನಗಿರಿ ಪೊಲೀಸ್ ಠಾಣೆ | | ಎ 1.ಮಹಮ್ಮದ್ ಹನೀಫ್<br>ಬಿನ್ ಸಕೀರ್ ಬಿ. ಕೆ<br>ವಯಸ್ಸುಃ 22 ವರ್ಷ,<br><br>ಎ 2. ಸೈಯದ್ ಖಲೀಲ್<br>ಯಾನೆ ಖಲೀಲ್ ಉಲ್ಲಾ<br>ಬಿನ್ ಸೈಯದ್ ನಯಾಜುಲ್ಲಾ<br>ವಯಸ್ಸುಃ 23 ವರ್ಷ,<br>ಇಬ್ಬರ ವಾಸಃ ವಡ್ನಾಳ್ ರಾಜಣ್ಣ ಎಕ್ಸಟೇನ್ಷನ್,<br>ಚನ್ನಗಿರಿ ಟೌನ್, ದಾವಣಗೆರೆ ಜಿಲ್ಲೆ |

**ದೋಷಾರೋಪಣೆ**

ನಾನು **ಕುಃ ಶಮ ಶ್ರೀವತ್ಸ,** 1 ನೇ ಹೆಚ್ಚುವರಿ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಆಪಾದಿಸುವುದೇನೆಂದರೆ ಆರೋಪಿತರಾದ ನೀವು:-

ಮೊದಲನೆಯದಾಗಿ ದಿನಾಂಕ: 27.07.2019 ರಂದು ರಾತ್ರಿ 11.45 ಸಮಯದಲ್ಲಿ ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಎ.ಪಿ.ಎಂ.ಸಿ ಆವರಣದಲ್ಲಿ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ ಸಗಟು ಮಳಿಗೆ 01 ರ ಗೋದಾಮಿನ ಕಿಟಕಿ ಸರಳುಗಳನ್ನು ಕಬ್ಬಿಣದ ರಾಡಿನಿಂದ ಮೀಟಿ ಮುರಿದು ಆರೋಪಿತರಾದ ನೀವುಗಳು ಸುಪ್ತ -ಅತಿಕ್ರಮವಾಗಿ ಪ್ರವೇಶ ಮಾಡುವ ಮೂಲಕ ಭಾ.ದಂ.ಸಂ. ಕಲಂ 457 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರಾದ ನೀವುಗಳು ಗೋದಾವಿನಲ್ಲಿರುವ ಪಡಿತರ ಅಕ್ಕಿ ತುಂಬಿದ ಮೂಟೆಗಳನ್ನು ಕಳ್ಳತನ ಮಾಡುವ ಮೂಲಕ ಭಾ.ದಂ.ಸಂ. ಕಲಂ 380 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ, ದಿನಾಂಕದಂದು ಆರೋಪಿತರಾದ ನೀವುಗಳು ಅಪರಾಧ ಮಾಡುವ ಪ್ರಯತ್ನ ಮಾಡಿದ್ದರಿಂದ ಭಾ.ದಂ.ಸಂ. ಕಲಂ 511 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ .

ದಿನಾಂಕ: 10.07.2023

Sd/-
( ಕುಃ ಶಮ ಶ್ರೀವತ್ಸ )
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನಗಿರಿ.